ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ * ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ *

# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದಲ್ಲಿ

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 01.12.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ವೀರಸಂವತ್ : 2550 ಪುಟಗಳು : 4

ಸಂಪುಟ : 17 ಸಂಚಿಕೆ : 23 ಸೋಪಾನ : 1050 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23


## ಜಿನಭಾಷಿತ

ಲವಣಸಮೋ ಣತ್ಥಿ ರಸೋ
ವಿಣ್ಣಾಣಸಮೋ ಯ ಬಂಧವೋ ಣತ್ಥಿ|
ಧಮ್ಮಸಮೋ ಣತ್ಥಿ ಣಿಹೀ
ಕೋಹಸಮೋ ವೇರಿಓ ಣತ್ಥಿ ॥ ವಜ್ಜಾಲಗ್ಗ, ಣೀಇವಜ್ಜಾ–1

ಉಪ್ಪಿಗೆ ಸಮನಾದ ರುಚಿಯಿಲ್ಲ, ವಿಜ್ಞಾನಕ್ಕೆ ಸಮನಾದ ಬಂಧುವಿಲ್ಲ, ಕ್ರೋಧಕ್ಕೆ ಸಮನಾದ ವೈರಿಯಿಲ್ಲ ಮತ್ತು ಧರ್ಮಕ್ಕೆ ಸಮನಾದ ನಿಧಿಯಿಲ್ಲ.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ದರ್ಶನದ ಸಮಯ :
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ
ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ
ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ
ದೂರವಾಣಿ : 9844143722

: ಶ್ರೀಮಠದ ಕಛೇರಿ :
ದೂರವಾಣಿ : 8431560480

: ವಸತಿ ವಿಭಾಗದ ಕಛೇರಿ :
ದೂರವಾಣಿ : 9353667645

: ಅಕ್ಷಯ ಶ್ರಾವಕ ಸತ್ಕಾರ ಭೋಜನಾಲಯದ ಸಮಯ :
ಉಪಹಾರ : ಬೆಳಗ್ಗೆ 08.00 ರಿಂದ 09.30ರವರೆಗೆ
ಭೋಜನ : 10.30 ರಿಂದ ಮಧ್ಯಾಹ್ನ 03.00
ಸಂಜೆ : 04.30 ರಿಂದ 06.30 ರವರೆಗೆ

**ಹೊರೆಕಾಣಿಕೆ ಸ್ವೀಕರಿಸಲಾಗುವುದು**

ಶ್ರೀಕ್ಷೇತ್ರಕ್ಕೆ ಆಹಾರ, ಔಷಧ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe


## ಯುಗಳ ಮುನಿಗಳ ವಿಹಾರ



ಶ್ರವಣಬೆಳಗೊಳ, ನ.20 : ಶ್ರೀಕ್ಷೇತ್ರದಲ್ಲಿ ಚಾತುರ್ಮಾಸ ಆಚರಿಸಿ ವಿಹಾರ ಕೈಗೊಂಡ ಪ.ಪೂ. ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ 108 ಅಮರಕೀರ್ತಿ ಮಹಾರಾಜರಿಗೆ ಪೂ. ಚಾರುಕೀರ್ತಿ ಶ್ರೀಗಳವರು ಪಾದಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಪ.ಪೂ. ಮುನಿಶ್ರೀ ಅಮೋಘಕೀರ್ತಿ ಮಹಾರಾಜರು ಅಭಿನವ ಚಾರುಕೀರ್ತಿ ಶ್ರೀಗಳವರ ನೇತೃತ್ವದಲ್ಲಿ ವರ್ಷಾಯೋಗ ಚಾತುರ್ಮಾಸ್ಯವು ವೈಭವ ಧರ್ಮ ಪ್ರಭಾವನೆಯೊಂದಿಗೆ ನಡೆದಿರುವುದು ಸಂತಸ ತಂದಿದೆ. ಜಿನೇಂದ್ರ ಭಗವಂತನ ಆಜ್ಞೆಯಂತೆ ಮುನಿಗಳ ವಿಹಾರವು ಹರಿಯುವ ನದಿಗಳ ನೀರಿನ ಹಾಗೆ ಯಾವಾಗಲೂ ಹರಿಯುತ್ತಾ ಇರಬೇಕೇ ಹೊರತು ಒಂದು ಕಡೆ ಇರಲು ಸಾದ್ಯವಿಲ್ಲ ಎಂದರು. ಮಂಗಳ ವಾದ್ಯಗಳು ಹಾಗೂ ನೂರಾರು ಶ್ರಾವಕ–ಶ್ರಾವಕಿಯರ ಜಯಕಾರದೊಂದಿಗೆ ಯುಗಲ ಮುನಿಗಳ ವಿಹಾರವು ಬಸದಿಹೊಸಕೋಟೆಯತ್ತ ಸಾಗಿತು.



## ಕರ್ಮಯೋಗಿ ಚಾರುಶ್ರೀಗಳವರ ನಿಷಧಿ ಮಂಟಪ ಮತ್ತು ಸ್ಮಾರಕ ಭವನ ನಿರ್ಮಾಣ ಕಾರ್ಯ ಪ್ರಗತಿಯಲ್ಲಿ



ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು 1970ರಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷರಾಗಿ ಜವಾಬ್ದಾರಿಯನ್ನು ವಹಿಸಿಕೊಂಡು ಸುಮಾರು 53 ವರ್ಷಗಳ ಕಾಲ ದಣಿವರಿಯದ ಕರ್ಮಯೋಗಿಯಾಗಿ ದೇಶ–ವಿದೇಶಗಳಲ್ಲಿ ಜಿನಧರ್ಮ ಪ್ರಭಾವನೆ ಮಾಡುತ್ತಾ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಪ್ರಗತಿಯ ಚಿಂತನೆಯೊಂದಿಗೆ ಶ್ರೀಕ್ಷೇತ್ರವನ್ನು ವಿಶ್ವವಿಖ್ಯಾತಗೊಳಿಸಿ, ನಾಲ್ಕು ಮಹಾಮಸ್ತಕಾಭಿಷೇಕ ಮಹೋತ್ಸವಗಳ ನೇತೃತ್ವ ವಹಿಸಿ ಯಶಸ್ವಿಗೊಳಿಸಿದ ಕೀರ್ತಿ ಶ್ರೀ ಸ್ವಾಮಿಗಳವರಿಗೆ ಸಲ್ಲುತ್ತದೆ. ಶ್ರೀಗಳವರ ಸಾಧನೆ ಎಷ್ಟು ನೆನೆದರೂ ಸಾಲದು.



ಪ್ರಾತಃಸ್ಮರಣೀಯ ಚಾರುಶ್ರೀಗಳವರ ನಿಷಧಿ ಮಂಟಪದ ಕಾರ್ಯ ಹಾಗೂ ಪ.ಪೂ. ಸ್ವಾಮಿಗಳವರ ಹಾಗೂ ಅವರು 53 ವರ್ಷಗಳು ಶ್ರೀಕ್ಷೇತ್ರದಲ್ಲಿ ಕೈಗೊಂಡ ಕಾರ್ಯಗಳನ್ನು ಕುರಿತ ಸಾಕ್ಷ್ಯಚಿತ್ರಗಳನ್ನೊಳಗೊಂಡ ಹಾಗೂ ಅವರು ಉಪಯೋಗಿಸಿದ ವಸ್ತುಗಳನ್ನೊಳಗೊಂಡ ಸ್ಮಾರಕ ಭವನ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ. ಶ್ರೀಗಳವರ ಜನ್ಮಸ್ಥಳವಾದ ಕಾರ್ಕಳ ತಾಲೂಕಿನ ಶ್ರೀಕ್ಷೇತ್ರ ವರಂಗದಲ್ಲಿ ಸ್ವಾಮಿಗಳವರ ಅಪೇಕ್ಷೆಯಂತೆ ಗ್ರಂಥಾಲಯ ಮತ್ತು ತ್ಯಾಗಿನಿವಾಸ ನಿರ್ಮಿಸಲು ಸಮಸ್ತ ಪೂಜ್ಯ ಶ್ರೀಸ್ವಾಮಿಗಳವರು ನಿರ್ಧರಿಸಿದ್ದಾರೆ. ಈ ಪುಣ್ಯ ಕಾರ್ಯದಲ್ಲಿ ಪ.ಪೂ. ಶ್ರೀಸ್ವಾಮಿಗಳವರ ಅಪಾರ ಭಕ್ತವೃಂದ ಹಾಗೂ ಸಮಸ್ತ ಧರ್ಮಬಂಧುಗಳು ತನು–ಮನ–ಧನದಿಂದ ಸಹಕಾರ ನೀಡಬಹುದಾಗಿದೆ.

### ಅಭಿನವ ಚಾರುಶ್ರೀಗಳವರ ಪ್ರಥಮ ನಡಿಗೆ ಶ್ರೀ ಕೂಷ್ಮಾಂಡಿನಿ ದೇವಿಯ ಮೂಲಸ್ಥಾನದೆಡೆಗೆ

## ಶ್ರೀಗಳವರ ಪ್ರಥಮ ಮಂಗಲ ಬಿಜಯಂಗೈವ ಕಾರ್ಯಕ್ರಮ














ಶ್ರವಣಬೆಳಗೊಳ, ನ.17 : ಪ.ಪೂ. ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ಪ್ರಥಮ ಮಂಗಲ ಬಿಜಯಂಗೈವ ಕಾರ್ಯಕ್ರಮವು ಕಂಬದಹಳ್ಳಿಯ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮಿಗಳ ಉಪಸ್ಥಿತಿಯಲ್ಲಿ ಕಲಾ ತಂಡಗಳು, ಭಕ್ತರ ಹರ್ಷೋದ್ಗಾರಗಳೊಂದಿಗೆ ವೈಭವದಿಂದ ನಡೆಯಿತು. ಶ್ರೀಮಠದ ಬಸದಿಯಲ್ಲಿನ ಭ. ಶ್ರೀ ನೇಮಿನಾಥ ತೀರ್ಥಂಕರರ ಯಕ್ಷಿ, ಕ್ಷೇತ್ರದ ಅಧಿದೇವತೆ ಶ್ರೀ ಕೂಷ್ಮಾಂಡಿನಿ ದೇವಿಗೆ ಪೂಜೆ ಸಲ್ಲಿಸಿ ಜೈನ ಮಠದ ಮುಂಭಾಗದಲ್ಲಿ ಶ್ರೀಗಳವರು ಅಲಂಕರಿಸಿದ ಮೇನೆಯಲ್ಲಿ ವಿರಾಜಮಾನರಾಗುತ್ತಿದ್ದಂತೆ ಪೂರ್ಣಕುಂಭ ಹಾಗೂ ಭವ್ಯ ಮೆರವಣಿಗೆಯೊಂದಿಗೆ ಪ್ರಾರಂಭಗೊಂಡಿತು. ಸೂರ್ಯಪಾನ, ಚಂದ್ರಪಾನ, ಹಿಡಿದ ಶ್ರಾವಕರು ಮೆರವಣಿಗೆಯಲ್ಲಿ ಸಾಗುತ್ತಾ ಜಿನಧರ್ಮದ, ಪೂಜ್ಯ ಶ್ರೀಗಳವರ ಜಯಘೋಷ ಮೊಳಗಿಸಿದ ಈ ಶೋಭಾಯಾತ್ರೆಯಲ್ಲಿ ಕೊಂಬು, ಕಹಳೆ, ಶಂಖನಾದ, ರಜತದಂಡ, ಛತ್ರಿ–ಚಾಮರ, ಬೀಸಣಿಗೆ, ಧ್ವಜಗಳ ಆಕರ್ಷಣೆ ಜನರ ಮನಸೂರೆಗೊಂಡಿತು. (..ನಾಲ್ಕನೇ ಪುಟಕ್ಕೆ)

## ಚಾರುಶ್ರೀ ವಾಣಿ



ದೇವಾಲಯ, ಬಸದಿಯ ಶಿಖರ ಮತ್ತು ರಥದ ಮೇಲಿನ ಕಲಶಗಳು ಮೇಲ್ಮುಖ–ವಾಗಿದ್ದು ನಮ್ಮ ಭಾವನೆಗಳು, ನಮ್ಮ ದೃಷ್ಟಿಯೂ ಸದಾ ಊರ್ಧ್ವಗಾಮಿಯಾಗಿರ –ಬೇಕೆಂಬುದನ್ನು ಸೂಚಿಸುತ್ತದೆ. ರಥದ ಕಲಶ ಸಿದ್ಧ ಶಿಲೆಯ ದ್ಯೂತಕವಾಗಿದ್ದು ಅಷ್ಟಕರ್ಮ ಗೆದ್ದು ಸಿದ್ಧನಾಗುವ ಯೋಗವೇ ನಮ್ಮ ಗುರಿಯಾಗಬೇಕು.

– ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು

## ಅಭಿನವ ಚಾರುಶ್ರೀ ನುಡಿ



### ಸ್ಮರಿಸಿ ಸಾಧಕರಾಗಿ

ಸಾಧನೆ ಎಂಬುದು ಸುಲಭದ ಮಾತಲ್ಲ. ಸಾಧನೆ ಎಂಬ ಸರಳವಾದ ಪದದಲ್ಲಿ ಸಾವಿರ ಕಷ್ಟಗಳಿವೆ. ಅಂತಹ ಸಾವಿರ ಕಷ್ಟಗಳನ್ನು ಎದುರಿಸಿ ಸಾವಿರ ಮೆಟ್ಟಿಲುಗಳನ್ನೇರಿ ಸಾಧಕನಾಗಬೇಕು. ಅದಕ್ಕಾಗಿ ಭಗವಂತನ ನಾಮಸ್ಮರಣೆಯು ಸಾಧನವಾಗಬೇಕು. ಭಗವಂತನ ನಾಮ ಸ್ಮರಿಸದಿದ್ದರೆ ಸಾಧನೆಯು ಕಠಿಣವಾಗಬಲ್ಲದು. ಅದಕ್ಕಾಗಿಯೇ ಹಿರಿಯರು ದೇವರ ಕೃಪೆಯಿದ್ದರೆ ಪರ್ವತವನ್ನೇ ಎತ್ತಿ ಹಿಡಿಯಬಹುದು ಎಂದು ಹೇಳುತ್ತಾರೆ.

ಲೌಕಿಕವಾಗಿ ಮಾಡುವ ಸಾಧನೆ ವ್ಯಕ್ತಿಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢವಾಗಿಸಬಹುದು. ಆದರೆ ಅಧ್ಯಾತ್ಮವಾಗಿ ಮೂಡುವ ಸಾಧನೆ ವ್ಯಕ್ತಿಯೊಬ್ಬನನ್ನು ಮುಕ್ತಿಯ ಮಾರ್ಗದಲ್ಲಿ ನಿಲ್ಲುವಂತೆ ಮಾಡುತ್ತದೆ. ಯಾರು ಭಾವಾನಾತ್ಮಕ ವಿಷಯಗಳಿಂದ ದೂರವಿದ್ದೂ ವಿಷಯ ಸುಖಗಳ ಮೇಲೆ ನಿಗ್ರಹ ಸಾಧಿಸಬಲ್ಲರೋ ಅವರು ನಿಜವಾಗಿಯೂ ಆನಂದವನ್ನು ಆಂತರಿಕವಾಗಿ ಅನುಭವಿಸಬಲ್ಲರು. ಜೈನಾಗಮವು ಹೇಳುವಂತೆ ಸುಖ–ದುಃಖ, ಲಾಭ–ನಷ್ಟ, ಸೋಲು–ಗೆಲುವುಗಳನ್ನು ಯಾರು ಸಮಚಿತ್ತದಿಂದ ಸಮಾನವಾಗಿ ಸ್ವೀಕರಿಸುವರೋ, ಅವುಗಳ ಬಗ್ಗೆ ಯಾರು ಅನಾಸಕ್ತರಾಗುವರೋ ಅವರೇ ನಿಜವಾದ ಸುಖಿಯಾಗಬಲ್ಲರು.

ನಿಜ ಸುಖವನ್ನು ಪಡೆಯಬೇಕಾದರೆ ನಮ್ಮಲ್ಲಿನ ಮಮಕಾರಗಳನ್ನು, ಕಷಾಯಗಳನ್ನು, ರಾಗ–ದ್ವೇಷ ಭಾವನೆಗಳಿಂದ ಹೊರಹಾಕಿ ವೀತರಾಗದ ಭಾವವನ್ನು ಹೊಂದುವಂತೆ ಆತ್ಮನನ್ನು ಅಣಿಗೊಳಿಸಬೇಕು. ಅದಕ್ಕಾಗಿ ಅಗತ್ಯ ಸಾಧನವನ್ನಾಗಿ ಭಗವಂತನ ಗುಣಗಳ ಸ್ಮರಣೆ ಮಾಡಬೇಕು.

ಭಗವಂತನ ಗುಣಗಳ ಸ್ಮರಣೆ ಮಾಡುವಲ್ಲಿ ಚಿತ್ತ ಚಾಂಚಲ್ಯವಿರಬಾರದು. ಜಗತ್ತಿನಲ್ಲಿ ಜಿನರ ಉಪದೇಶಗಳೇ ಆನಂದಮಯವಾಗಿದೆ. ಅವುಗಳ ಪ್ರಾಪ್ತಿಗಾಗಿ ಜಿನರ ಸ್ಮರಣೆಯೊಂದಿಗೆ ಏಕರೂಪನಾಗಬೇಕು. ಇದಕ್ಕಾಗಿ ಶರೀರ ಮತ್ತು ಮನಸ್ಸನ್ನು ಏಕಾಗ್ರತೆಯಲ್ಲಿ ನಿಲ್ಲಿಸಬೇಕು, ಅದಕ್ಕಾಗಿ ಧ್ಯಾನವು ಮೂಲಮಂತ್ರವಾಗಬೇಕು.

ಭಗವಂತನ ಸ್ಮರಣೆಗೆ ಶ್ರದ್ಧೆ ಅತಿಮುಖ್ಯ. ಶ್ರದ್ಧೆ ಇಲ್ಲದೇ ಮಾಡುವ ಭಗವಂತನ ಸ್ಮರಣೆ ಫಲನೀಡದು. ಶ್ರದ್ಧೆ ಇಲ್ಲದೆ ಮಾಡುವ ಯಾವುದೇ ಕಾರ್ಯಗಳು ಪಾಪಕರ್ಮಕ್ಕೆ ಕಾರಣವಾಗುತ್ತದೆ.

ಜಿನರ ಸ್ಮರಣೆಯಿಂದಲೇ ಆಚಾರ್ಯ ಮಾನತುಂಗರು, ಸಮಂತಭದ್ರರು ತಮಗೆ ಒದಗಿಬಂದ ಕಷ್ಟಕ್ಕೆ ಪರಿಹಾರ ಕಂಡುಕೊಂಡು ಸಾಧನೆಯನ್ನು ಪ್ರಾಪ್ತಿಮಾಡಿಕೊಂಡರು. ಹಾಗಾಗಿ ಸಾಧನೆಯ ಹಾದಿಯಲ್ಲಿ ಎಷ್ಟೋ ಮುಳ್ಳುಗಳಿದ್ದರೂ ಭಗವಂತನ ಸ್ಮರಣೆಯು ಹಾದಿಯನ್ನ ಸುಗಮಗೊಳಿಸಬಲ್ಲದು; ಸಾಧಕವಾಗಲು ಪ್ರೇರೇಪಿಸಬಲ್ಲದು.

– ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು


ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?

ಸಂಪರ್ಕಿಸಿ : 8660118443

ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

ವರ್ಣಮುದ್ರಿತ 2024ನೇ ವರ್ಷದ ಗೊಮ್ಮಟವಾಣಿ ಕ್ಯಾಲೆಂಡರ್‌ಗಳಿಗೆ ಸಂಪರ್ಕಿಸಿ

## ಗೊಮ್ಮಟಗಿರಿಯ ಬಾಹುಬಲಿ ಸ್ವಾಮಿಗೆ ಮಹಾಮಜ್ಜನ



**ಹುಣಸೂರು, ನ. 26 :** ತಾಲೂಕಿನ ಬಿಳಿಕೆರೆ ಹೋಬಳಿಯ ಗೊಮ್ಮಟಗಿರಿಯಲ್ಲಿ ಭ. ಶ್ರೀ ಗೊಮ್ಮಟೇಶ್ವರಸ್ವಾಮಿಯ 74ನೇ ವರ್ಷದ ವಾರ್ಷಿಕ ಮಸ್ತಕಾಭಿಷೇಕವು ಹೊಂಬುಜ, ಕನಕಗಿರಿ, ಕಂಬದಹಳ್ಳಿ, ಆರತಿಪುರ ಹಾಗೂ ವರೂರಿನ ಪ.ಪೂ. ಸ್ವಸ್ತಿಶ್ರೀ ಭಟ್ಟಾರಕ ಸ್ವಾಮಿಗಳ ಪಾವನ ಸಾನ್ನಿಧ್ಯದಲ್ಲಿ ಹಾಗೂ ಸಾವಿರಾರು ಭಕ್ತರ ಉದ್ಘೋಷಗಳೊಂದಿಗೆ ಸಂಭ್ರಮದಿಂದ ನೆರವೇರಿತು. ಮೊದಲಿಗೆ ಜಲಾಭಿಷೇಕ ಆನಂತರ ಎಳನೀರು, ಕಬ್ಬಿನ ಹಾಲು, ಅರಿಶಿನ, ಚಂದನ, ಕ್ಷೀರ, ಕಲ್ಕಚೂರ್ಣ, ಅಷ್ಟಗಂಧ, ಅಕ್ಕಿಹಿಟ್ಟು, ಶ್ರೀಗಂಧ, ಕಷಾಯಾಭಿಷೇಕಗಳಲ್ಲಿ ಕಂಗೊಳಿಸಿದ ಬಾಹುಬಲಿ ಸ್ವಾಮಿಯನ್ನು ಕಣ್ತುಂಬಿಕೊಂಡ ಭಕ್ತರು ಜಯಘೋಷ ಮೊಳಗಿಸಿ ಭಕ್ತಿಯ ಪರಾಕಾಷ್ಠೆ ಮೆರೆದರು. ಪ.ಪೂ. ಭಟ್ಟಾರಕ ಸ್ವಾಮಿಗಳು ನೂತನವಾಗಿ ನಿರ್ಮಿಸಿರುವ ವಿಶ್ರಾಂತಿ ಗೃಹದ ಉದ್ಘಾಟನೆ ಮತ್ತು 1.5 ಕೋಟಿ ರೂ. ವೆಚ್ಚದ ಸಭಾಭವನ, ಯಾತ್ರಿನಿವಾಸ ಕಟ್ಟಡಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಆಶೀರ್ವಚನ ನೀಡಿದರು.

## ಬಸದಿಹೊಸಕೋಟೆ - ಬಾಹುಬಲಿ ಸ್ವಾಮಿ ಪುನರ್‌ಪ್ರತಿಷ್ಠಾಪನೆ



**ಕೆಆರ್. ಪೇಟೆ, ನ.25 :** ಸಮೀಪದ ಬಸದಿ ಹೊಸಕೋಟೆಯಲ್ಲಿ ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ 17 ಅಡಿ ಎತ್ತರದ ಭ. ಶ್ರೀ ಬಾಹುಬಲಿ ಸ್ವಾಮಿ ಮೂರ್ತಿಯ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮ ಯುಗಲ ಮುನಿಗಳಾದ ಪ.ಪೂ. ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ 108 ಅಮರಕೀರ್ತಿ ಮಹಾರಾಜರ ನೇತೃತ್ವದಲ್ಲಿ ನ. 23 ರಿಂದ ಶ್ರೀ ಸಿದ್ಧಚಕ್ರ ಆರಾಧನೆ ಹಾಗೂ ನ. 25ರಂದು ಭ. ಬಾಹುಬಲಿ ಸ್ವಾಮಿಗೆ ಮಹಾಮಸ್ತಕಾಭಿಷೇಕ ನೆರವೇರಿತು. ಜಲ, ಎಳನೀರು, ಕಬ್ಬಿನಹಾಲು, ಅರಿಶಿನ, ಚಂದನ, ಕ್ಷೀರ, ಕಲ್ಕಚೂರ್ಣ, ಅಷ್ಟಗಂಧ, ಅಕ್ಕಿಹಿಟ್ಟು, ಶ್ರೀಗಂಧ, ಕಷಾಯಗಳಿಂದ ಅಭಿಷೇಕ ಮಾಡಲಾಯಿತು. ಕನಕಗಿರಿ, ಕಂಬದಹಳ್ಳಿ, ಆರತಿಪುರ, ವರೂರು, ಹೊಂಬುಜದ ಪ.ಪೂ. ಸ್ವಸ್ತಿಶ್ರೀ ಭಟ್ಟಾರಕ ಸ್ವಾಮಿಗಳವರು ಪಾವನ ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಶ್ರೀ ಬಾಹುಬಲಿ ತೀರ್ಥ, ಕಾವೇರಿ ಧಾಮ ಎಂದು ಮರು ನಾಮಕರಣ ಮಾಡಲಾಯಿತು.

## ಸಿಂದಗೆರೆಯಲ್ಲಿ ವಾರ್ಷಿಕ ಪೂಜೆ

**ಚಿಕ್ಕಮಗಳೂರು :** ಜಿಲ್ಲೆಯ ಸಿಂದಗೆರೆಯಲ್ಲಿ ಹೊಯ್ಸಳ ವಂಶದ ದಂಡನಾಯಕರಾದ ಮರಿಯಾನೆ ಮತ್ತು ಭರತಮಯ್ಯ ದಂಡನಾಯಕರು ನಿರ್ಮಿಸಿರುವ ಹೊಯ್ಸಳ ಶೈಲಿಯ ಕಲಾತ್ಮಕ ಮತ್ತು ಪುರಾತನ ಭ. ಶ್ರೀ 1008 ಸುಪಾರ್ಶ್ವನಾಥಸ್ವಾಮಿ ಹಾಗೂ ಬ್ರಹ್ಮಯಕ್ಷ ಜಿನಮಂದಿರವಿದ್ದು, ಪ್ರತಿ ವರ್ಷದಂತೆ **ಡಿಸಂಬರ್ 24ರ ಭಾನುವಾರದಂದು** ವಾರ್ಷಿಕ ಪೂಜಾ ಮಹೋತ್ಸವ ಜರುಗಲಿದೆ. ಬೆಳಿಗ್ಗೆ ಭ. ಸುಪಾರ್ಶ್ವನಾಥರಿಗೆ ಪಂಚಾಮೃತ ಅಭಿಷೇಕ, ಬ್ರಹ್ಮಯಕ್ಷರಿಗೆ ಪೂಜೆ, ಮಧ್ಯಾಹ್ನ ಶ್ರೀ ಬ್ರಹ್ಮಯಕ್ಷ ದೇವರ ಪಲ್ಲಕ್ಕಿ ಉತ್ಸವ ಇರುತ್ತದೆ. ಸಭಾಕಾರ್ಯಕ್ರಮದಲ್ಲಿ ಶ್ರವಣಬೆಳಗೊಳದ ವೀರೇಂದ್ರಕುಮಾರ್ ಬೇಗೂರುರವರು 'ಶ್ರವಣಬೆಳಗೊಳ ಅಂದು–ಇಂದು' ಕುರಿತು ಉಪನ್ಯಾಸ ನೀಡಲಿದ್ದು, ಬೆಂಗಳೂರಿನ ನಾಗರತ್ನರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಧರ್ಮಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪೂಜಾ ವ್ಯವಸ್ಥಾಪನಾ ಸಮಿತಿಯವರು ಪ್ರಕಟಣೆಯಲ್ಲಿ ಕೋರಿದ್ದಾರೆ.


## ಬೃಹತ್ ಸಿದ್ಧಚಕ್ರ ಆರಾಧನಾ ಮಹೋತ್ಸವ ಸಂಪನ್ನ



**ಬೆಂಗಳೂರು, ನ. 20 :** ಹೆಣ್ಣೂರಿನಲ್ಲಿರುವ ಶ್ರೀ 1008 ಶಾಂತಿನಾಥ ದಿಗಂಬರ ಜಿನಮಂದಿರದಲ್ಲಿ ಪ.ಪೂ. ಮುನಿಶ್ರೀ 108 ವೀರಸಾಗರ ಮಹಾರಾಜರ ಪಾವನ ಸಾನ್ನಿಧ್ಯದಲ್ಲಿ ಎಂಟು ದಿನಗಳ ಬೃಹತ್ ಸಿದ್ಧಚಕ್ರ ಆರಾಧನಾ ಮಹೋತ್ಸವವು ಜರುಗಿತು.

## ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟಿಗೆ ನೂತನ ಟ್ರಸ್ಟಿಗಳ ನೇಮಕ





**ಬೆಂಗಳೂರು, ನ. 11 :** ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟಿಗೆ ಟ್ರಸ್ಟಿ ಡಿ. ನೇಮಚಂದ್ರ ಅವರನ್ನು ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿಯಾಗಿ, ಸಮಾಜದ ಗಣ್ಯರಲ್ಲೊಬ್ಬರಾದ ಡಾ. ಪದ್ಮರಾಜ ದಂಡಾವತಿ ಹಾಗೂ ಕೆಜೆಎ ಕೋಶಾಧಿಕಾರಿ ಎಂ. ಮಹಾವೀರ ಜೈನ್ ಅವರುಗಳನ್ನು ಟ್ರಸ್ಟಿಯಾಗಿ ಸರ್ವಾನುಮತದಿಂದ ನೇಮಕ ಮಾಡಲಾಗಿದೆ. ಹಿಂದಿನ ಮ್ಯಾನೇಜಿಂಗ್ ಟ್ರಸ್ಟಿ ಜಿ.ಪಿ.ನಾಗೇಂದ್ರ ಪ್ರಸಾದ್ ಹಾಗೂ ಟ್ರಸ್ಟಿ ಮೈಸೂರಿನ ಎನ್. ಕಿಶೋರ್ ಅವರು ವೈಯಕ್ತಿಕ ಕಾರಣಗಳಿಂದ ರಾಜೀನಾಮೆ ನೀಡಿರುತ್ತಾರೆ.

## ಜೈನ್ ಮಿಲನ್ ಸದಸ್ಯರುಗಳಿಂದ ತೀರ್ಥಕ್ಷೇತ್ರ ದರ್ಶನ




**ಬೆಂಗಳೂರು :** ಇತ್ತೀಚೆಗೆ ಜೈನ್ ಮಿಲನ್‌ನ (ಪಶ್ಚಿಮ) 45 ಸದಸ್ಯರುಗಳು ಮಾಂಗಿ–ತುಂಗಿ, ಎಲ್ಲೋರಾ ಅಂತರಿಕ್ಷ ಪಾರ್ಶ್ವನಾಥ, ಸಮ್ಮೇದಗಿರಿ, ಪನಾಗರ್, ನೇಮಾವರ್, ಸಿದ್ಧವರ ಕೂಟ, ಭಾವನ್‌ಗಂಜ್ ಹಾಗೂ ಅಹಮದಾಬಾದ್ ಕ್ಷೇತ್ರಗಳ ದರ್ಶನ ಪಡೆದರು. ಪಾವಾಗಡ ಸಿದ್ಧಕ್ಷೇತ್ರದಲ್ಲಿ ಮಿಲನ್‌ನ ಮಾಸಿಕ ಸಭೆಯನ್ನು ಶ್ರೀಮತಿ ಪದ್ಮಿನಿ ಪದ್ಮರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ತೀರ್ಥಯಾತ್ರೆ ಸಂದರ್ಭದಲ್ಲಿ ಯಾತ್ರಾರ್ಥಿಗಳು ಬಸದಿಗಳ ಜೀರ್ಣೋದ್ಧಾರ, ಗೋಶಾಲೆ, ಶಾಲಾ ಮಕ್ಕಳ ಸಹಾಯಕ್ಕಾಗಿ ಒಟ್ಟು 45,000 ರೂಗಳ ದಾನ ನೀಡಿದರು.

## ದಾವಣಗೆರೆ ಜಿನಮಂದಿರಕ್ಕೆ ದಶಮಾನೋತ್ಸವ ಸಂಭ್ರಮ

**ದಾವಣಗೆರೆ :** ಭ. ಶ್ರೀ 1008 ಕಲ್ಪದ್ರುಮ ಆದಿನಾಥ ಜಿನಮಂದಿರದ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವವು ಡಿಸೆಂಬರ್ 9 ಮತ್ತು 10ರಂದು ಪ.ಪೂ. ಆಚಾರ್ಯಶ್ರೀ ಪ್ರಮುಖ ಸಾಗರ ಮಹಾರಾಜರು, ಪ.ಪೂ. ಮುನಿಶ್ರೀ ಪುಣ್ಯಸಾಗರ ಮಹಾರಾಜರು ಮತ್ತು ಪ.ಪೂ. ಆಚಾರ್ಯಶ್ರೀ ಪ್ರಣಾಮಸಾಗರ ಮಹಾರಾಜರ ಆಶೀರ್ವಾದೊಂದಿಗೆ ಹಾಗೂ ಕನಕಗಿರಿ, ಅರಿಹಂತಗಿರಿ, ಹೊಂಬುಜ, ಸ್ವಾದಿ, ನರಸಿಂಹರಾಜಪುರ, ಆರತಿಪುರದ ಪ.ಪೂ. ಭಟ್ಟಾರಕ ಸ್ವಾಮಿಗಳವರ ಪಾವನ ಸಾನ್ನಿಧ್ಯ ಮತ್ತು ಮಾರ್ಗದರ್ಶನದಲ್ಲಿ ಜರುಗಲಿದೆ.


## ಎಸ್. ಜಿತೇಂದ್ರಕುಮಾರ್‌ಗೆ ಆದರ್ಶ ಜೈನಸಮಾಜರತ್ನ ಪ್ರಶಸ್ತಿ

**ಬೆಂಗಳೂರು :** ಉತ್ತರ ಕರ್ನಾಟಕ ಜೈನ ಬಾಂಧವರು, ಬೆಂಗಳೂರು ಹಾಗೂ ಜಿನಗೌಡ ಸುಭಾಶ ಪಿ. ಟ್ರಸ್ಟ್, ಬೆಂಗಳೂರು ಅವರ ಜಂಟಿ ಸಹಯೋಗದಲ್ಲಿ ಕೊಡಮಾಡುವ ಆದರ್ಶ ಜೈನ ಸಮಾಜರತ್ನ ಪ್ರಶಸ್ತಿಗೆ ಕರ್ನಾಟಕ ಜೈನ ಅಸೋಸಿಯೇಷನ್ನಿನ ಮಾಜಿ ಅಧ್ಯಕ್ಷರು ಹಾಗೂ ಪಂಡಿತರತ್ನ ಎ. ಶಾಂತಿರಾಜ ಟ್ರಸ್ಟ್‌ನ ಅಧ್ಯಕ್ಷರಾದ ಎಸ್. ಜಿತೇಂದ್ರಕುಮಾರ್ ಅವರನ್ನು ಆಯ್ಕೆ ಮಾಡಿದೆ. ಪ್ರಶಸ್ತಿಯು 25 ಸಾವಿರ ನಗದು, ಫಲಕ ಒಳಗೊಂಡಿದೆ. ಜನವರಿ 14ರಂದು ಬೆಂಗಳೂರಿನಲ್ಲಿ ನಡೆಯುವ ಸಂಕ್ರಾಂತಿ ಸಂಭ್ರಮಾಚರಣೆ ಸಮಾರಂಭದಲ್ಲಿ ಡಿ. ಸುರೇಂದ್ರಕುಮಾರ್‌ರವರು ಪ್ರದಾನ ಮಾಡಲಿದ್ದಾರೆ ಎಂದು ಸುಭಾಶ ಜಿನಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೈದ್ಯಕೀಯ ಕ್ಷೇತ್ರದಲ್ಲಿ ಅಭೀಷ್‌ವರ್ಮ ಹೆಗ್ಡೆ ಸಾಧನೆ


**ಮಂಗಳೂರು :** ಕಂಕನಾಡಿ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಮೂತ್ರಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ **ಡಾ. ಅಭೀಷ್‌ವರ್ಮ ಹೆಗ್ಡೆ,** MBBS, MS, DrNB (General Surgery), MRCS(ENG.), FMAS ಹಾಗೂ MCH, DRNB (ಮೂತ್ರಶಾಸ್ತ್ರ) ಮುಂಬಯಿನಲ್ಲಿ ಪೂರ್ಣಗೊಳಿಸಿರುತ್ತಾರೆ. ಇವರಿಗೆ ಎಂಎಸ್‌ಕೆಸಿಸಿ (ಮೆಮೋರಿಯಲ್ ಸ್ಲೋನ್ ಕೆಟರಿಂಗ್ ಕ್ಯಾನ್ಸರ್ ಸೆಂಟರ್) ನ್ಯೂಯಾರ್ಕ್ ಕ್ಲಿನಿಕಲ್ ಫೆಲೋಗಾಗಿ ಟಾಟಾ ಅನುದಾನ–2022. ವಿಶ್ವ ಎಂಡೋಯುರೊಲಾಜಿಕಲ್ ಸೊಸೈಟಿ–ಅಶುತೋಷ್ ತಿವಾರಿ–ಅಲಿ ಆರ್. ಕುರಲ್ ಅವಾರ್ಡ್‌ನಿಂದ ಸದಸ್ಯತ್ವ ಪ್ರಶಸ್ತಿ 2023ರಲ್ಲಿ ಲಭಿಸಿರುತ್ತದೆ. ಯೂರೋಲಾಜಿ ಸೊಸೈಟಿ ಆಫ್ ಇಂಡಿಯಾ ಗೋಲ್ಡ್ ಮೆಡಲ್ ಹೀಗೆ ಹಲವಾರು ಪ್ರಶಸ್ತಿಗಳನ್ನು ಹಾಗೂ ಅನುದಾನಗಳನ್ನು ತಮ್ಮ ಮುಡಿಗೇರಿಸಿಕೊಂಡಿರುತ್ತಾರೆ. ಪ್ರಸ್ತುತ ತಮ್ಮ ಪತ್ನಿ **ಡಾ. ಸ್ಮಿತಾರಾವ್**‌ರವರೊಂದಿಗೆ ಅಕ್ಟೋಬರ್ 18ರಂದು U-Breathe ಹೆಸರಿನ ಕ್ಲಿನಿಕ್‌ನ್ನು ಮಂಗಳೂರಿನ ಬಲ್ಮಟ್ಟದಲ್ಲಿ ಪ್ರಾರಂಭಿಸಿ ವೈದ್ಯಕೀಯ ಸೇವೆ ನೀಡುತ್ತಿದ್ದಾರೆ.

## ಭ. ಮಹಾವೀರ ಸ್ವಾಮಿ ಚಿತ್ರದ ಅಂಚೆ ಕಾರ್ಡ್ ಬಿಡುಗಡೆ










**ಮೈಸೂರು, ನ. 13 :** ಭ. ಶ್ರೀ ಮಹಾವೀರ ತೀರ್ಥಂಕರರ 2550ನೇ ನಿರ್ವಾಣ ಮಹೋತ್ಸವ ಮತ್ತು ಅಹಿಂಸಾ ವರ್ಷದ ಸಂದರ್ಭದಲ್ಲಿ ಮೂಡಬಿದ್ರಿಯ ಎಕ್ಸಲೆಂಟ್ ಕಾಲೇಜು ಮತ್ತು ಹುಬ್ಬಳ್ಳಿಯ ಸಂಸ್ಕಾರ ಸ್ಕೂಲ್ ಸಹಭಾಗಿತ್ವದಲ್ಲಿ ಅಂಚೆ ಇಲಾಖೆಯು ಹೊರತಂದಿರುವ ಮಹಾವೀರರ ಅಂತಿಮ ಧರ್ಮೋಪದೇಶ ಮತ್ತು ನಿರ್ವಾಣ ಮಹೋತ್ಸವ ಚಿತ್ರವನ್ನೊಳಗೊಂಡ ಪಿಕ್ಚರ್ ಪೋಸ್ಟ್ ಕಾರ್ಡನ್ನು ಮೈಸೂರಿನ ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಡುಗಡೆಗೊಳಿಸಿದರು

## ಬುದ್ಧಿಮಾಂದ್ಯ ಹೆಣ್ಣುಮಕ್ಕಳಿಗೆ ಧನಸಹಾಯ

**ಬೆಂಗಳೂರು :** ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಎರಡು ವರ್ಷಗಳಿಂದ ಪ್ರತಿಶತ 50ಕ್ಕಿಂತ ಹೆಚ್ಚಿನ ಬುದ್ಧಿಮಾಂದ್ಯತೆ ಇರುವ ಹೆಣ್ಣುಮಕ್ಕಳಿಗೆ ಜಿ.ಸಿ.ಸಗರೆಯವರ ಆರ್ಥಿಕ ನೆರವಿನಿಂದ ಧನಸಹಾಯ ನೀಡುತ್ತಾ ಬರುತ್ತಿದೆ. ಈ ಸಾಲಿನಲ್ಲಿ ಧನಸಹಾಯ ಪಡೆಯಲು ಪ್ರತಿಶತ 50ಕ್ಕೂ ಹೆಚ್ಚು ಬುದ್ಧಿಮಾಂದ್ಯತೆ ಇರುವ ದಿಗಂಬರ ಜೈನ ಹೆಣ್ಣುಮಕ್ಕಳ ಪೋಷಕರು ವೈದ್ಯರಿಂದ ಪ್ರಮಾಣಪತ್ರ, ಹೆಣ್ಣುಮಗಳ ಆಧಾರ್ ಕಾರ್ಡ್ ಪ್ರತಿ, ಪೋಷಕರ ವಾರ್ಷಿಕ ಆದಾಯದ ಪ್ರಮಾಣಪತ್ರಗಳೊಂದಿಗೆ ಸ್ಪಷ್ಟ ಕೈಬರಹದ ಅರ್ಜಿಯನ್ನು **ಡಿಸೆಂಬರ್ 20**ರೊಳಗೆ ಟ್ರಸ್ಟಿನ ಕಾರ್ಯಾಲಯಕ್ಕೆ ಕಳುಹಿಸಿಕೊಡಲು ಟ್ರಸ್ಟಿನ ಅಧ್ಯಕ್ಷರಾದ ಎಸ್. ಜಿತೇಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು : ಜಿನಗೌಡ ಸುಭಾಷ ಪಿ. ಟ್ರಸ್ಟ್ ಹಾಗೂ ಬೆಂಗಳೂರಿನ ಉತ್ತರ ಕರ್ನಾಟಕ ಜೈನ ಬಾಂಧವರು ಜಂಟಿಯಾಗಿ ಉತ್ತರ ಕರ್ನಾಟಕದ ಬಡ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಯಾವುದೇ ವರ್ಗದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಶಾಲೆ ಹೆಸರು, ವಿಳಾಸವನ್ನು ಒಳಗೊಂಡ ಕೈ ಬರಹದ ಅರ್ಜಿಯನ್ನು ಡಾ. ಅಜಿತ ಮುರುಗುಂಡೆ, ನಂ ಸಿ–156, ಕೆಪಿಡಬ್ಲೂಡಿ ಕ್ವಾಟ್ರರ್ಸ್, ಜೀವನ ಬೀಮಾನಗರ, ಬೆಂಗಳೂರು –75 ಇಲ್ಲಿಗೆ ಡಿಸೆಂಬರ್ 31ರ ಒಳಗಾಗಿ ತಲುಪುವಂತೆ ಕಳುಹಿಸುವುದು. ಜನವರಿ 14ರಂದು ಬೆಂಗಳೂರಿನಲ್ಲಿ ನಡೆಯುವ ಸಂಕ್ರಾಂತಿ ಸಂಭ್ರಮಾಚರಣೆ ಸಮಾರಂಭದಲ್ಲಿ ಶಿಷ್ಯವೇತನವನ್ನು ವಿತರಿಸಲಾಗುವುದು.


## ಅಭಿನಂದನೆಗಳು



**ಡಾ. ಸ್ಮಿತಾ ಎಸ್. ರಾವ್**

ಸ್ತನ ಮತ್ತು ಅಂತಃಸ್ರಾವಕ ಶಸ್ತ್ರಚಿಕಿತ್ಸಕಿ, ಮಂಗಳೂರು

ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆದ FEBS [ಫೆಲೋ ಆಫ್ ಯುರೋಪಿಯನ್ ಬೋರ್ಡ್ ಆಫ್ ಸರ್ಜರಿ (ಸ್ತನ ಶಸ್ತ್ರಚಿಕಿತ್ಸೆ)] ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಇವರಿಗೆ ಹಾರ್ದಿಕ ಅಭಿನಂದನೆಗಳು

ಶ್ರೀಮತಿ ನಯನ ಹೆಗ್ಡೆ ಮತ್ತು ಕುಟುಂಬ ವರ್ಗದವರು

## ವಿಶೇಷ ದಿನಗಳು

**01.12.2023 ಶುಕ್ರವಾರ :**
ಭ. ಶ್ರೀ ಮಲ್ಲಿನಾಥ ತೀರ್ಥಂಕರರ ಜನ್ಮ ಕಲ್ಯಾಣ ಮತ್ತು ತಪೋ ಕಲ್ಯಾಣ

**02.12.2023 ಶನಿವಾರ :**
ಶ್ರವಣಬೆಳಗೊಳ ಅಭಿನವ ಶ್ರೀಗಳವರ ದೀಕ್ಷಾ ವಾರ್ಷಿಕ ದಿವಸ ಮತ್ತು ಶ್ರೀಕ್ಷೇತ್ರ ಹೊಂಬುದಲ್ಲಿ ಲಕ್ಷ ದೀಪೋತ್ಸವ

**03.12.2023 ಭಾನುವಾರ :**
ಭ. ಶ್ರೀ ಶಂಭವನಾಥ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ

**05.12.2023 ಮಂಗಳವಾರ :** ಅಷ್ಟಮಿ

**11.12.2023 ಸೋಮವಾರ :**
ತ್ರಯೋದಶಿ/ಚತುರ್ದಶಿ, ಭ. ಶ್ರೀ ಪದ್ಮಪ್ರಭ ತೀರ್ಥಂಕರರ ಕೇವಲಜ್ಞಾನ ಕಲ್ಯಾಣ

**12.12.2023 ಮಂಗಳವಾರ :** ಅಮಾವಾಸ್ಯೆ

**16.12.2023 ಶನಿವಾರ :**
ಧರ್ನುಮಾಸ ಪ್ರಾರಂಭ (ಸಂಕ್ರಮಣ)

## ಜೈನ್ ಕ್ವಿಜ್

1) ಮನ:ಪರ್ಯಾಯ ಇದು ಯಾವುದರ ಭೇದವಾಗಿದೆ?
2) ಪುಷ್ಪದಂತ ತೀರ್ಥಂಕರರ ಇನ್ನೊಂದು ಹೆಸರು?
3) ರತ್ನಕರಂಡಕ ಶ್ರಾವಕಾಚಾರ ಗ್ರಂಥವನ್ನು ರಚಿಸಿದವರು?
4) ಬಾಹುಬಲಿಗೆ ಇದ್ದ ಪದವಿ ಯಾವುದು ?
5) ದೇಶ ಸ್ವತಂತ್ರ ನಂತರ ಶ್ರವಣಬೆಳಗೊಳಕ್ಕೆ ಪ್ರಥಮ ಭೇಟಿ ನೀಡಿದ ಭಾರತದ ಪ್ರಧಾನಿ ಯಾರು ?

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 10–12–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು. ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :
1) ಜೀವಂಧರ ಕುಮಾರ 2) ವಿಶಾಖಾಚಾರ್ಯರಿಗೆ 3) ಭ.ಶ್ರೀ ಪಾರ್ಶ್ವನಾಥರ ಮತ್ತು ನಾಗಕುಮಾರರ ಚರಿತ್ರೆ 4) ವೃಷಭ ಸೇನ 5) ಮರ್ಕುಲೀ

**ಮೊದಲು ಸರಿ ಉತ್ತರ ಬರೆದವರು :**
1) ಮಾನ್ವಿ ಜೈನ್, ಮಾಯಸಂದ್ರ 2) ಮಂಜುಳ ಪ್ರಭಾಕರ್
3) ಪ್ರಮೀಳ ಪ್ರಕಾಶ್, ಮೈಸೂರು 4) ಜಿ.ಎಸ್.ನಿರ್ಮಲಮ್ಮ, ಶ್ರವಣಬೆಳಗೊಳ
5) ಅಲಕಾ ಬಾ. ಚಿಕ್ಕೋಡಿ, ಶ್ರವಣಬೆಳಗೊಳ


**ಇವರುಗಳಿಗೆ ಶುಭಾಶಯಗಳು**

## ಜಿನ ಪದಬಂಧ–06

**ಮೇಲಿನಿಂದ ಕೆಳಕ್ಕೆ**
1) ಜಂಬೂ ದ್ವೀಪಾದಿ ದ್ವೀಪಗಳನ್ನು ಸುತ್ತುವರಿದಿರುವ 16 ಸಮುದ್ರಗಳಲ್ಲಿ ಒಂದಾದ ಇದು ಉಪ್ಪಿನ ಹೆಸರನ್ನು ಹೊಂದಿದೆ (3)
2) 6 ವಿಧವಾದ ಅಂತರಂಗ ತಪಗಳಲ್ಲಿ ಒಂದಾದ ಇದು ರತ್ನತ್ರಯಧಾರಿಗಳಲ್ಲಿ ನಮ್ರತೆಯಿಂದಿರುವುದು (3)
3) ಜೀವ ಮೊದಲಾದ ದ್ರವ್ಯಗಳಿಗೆ ಅವಕಾಶವನ್ನು ಕೊಡುವ ಷಡ್ದ್ರವ್ಯಗಳಲ್ಲಿ ಒಂದು (3)
5) 14 ಗುಣಸ್ಥಾನಗಳಲ್ಲಿ ಒಂದು ಅಥವಾ 3 ಕರಣಗಳಲ್ಲಿ ಒಂದು (3)
6) ತೀರ್ಥಂಕರ ಪದವಿಯನ್ನು ಪಡೆದ ಕೇವಲಜ್ಞಾನಿಗಳಿಗೆ ಒದಗಿಬರುವ 34 ವಿಶೇಷಗಳು (4)
7) ಪಂಚೇಂದ್ರಿಯ ತಿರ್ಯಂಚಗಳಲ್ಲಿ ಇರುವ ಈ ಜೀವ ಆಕಾಶದಲ್ಲಿ ಸಂಚರಿಸುತ್ತವೆ (4)
8) 8 ಬಗೆಯ ಮದಗಳಲ್ಲಿ ತಾನು ಪೂಜ್ಯನಾದವನು ಎಂಬ ಗರ್ವ (4)
9) ವರ್ತಮಾನ ಕಾಲದ ಸುಮತಿನಾಥ ತೀರ್ಥಂಕರರ 3 ಭವಗಳಲ್ಲಿ ಪ್ರಥಮ ಭವ (4)
11) ವರ್ತಮಾನ ಕಾಲದ 20 ತೀರ್ಥಂಕರರು ಮೋಕ್ಷ ಹೊಂದಿದ ಗಿರಿ ತಿರುಗಿದೆ (3)
13) ಭಗವಾನ್ ಮಹಾವೀರರ ಕಾಲದಲ್ಲಿ ಈ ಭಾಷೆ ಜನಸಾಮಾನ್ಯರ ಭಾಷೆಯಾಗಿತ್ತು ಅಥವಾ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಈ ಭಾಷೆಯ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಇದೆ (3)
14) ಧರ್ಮಾನುಷ್ಠಾನವನ್ನು ನಿಯಮ ಪೂರ್ವಕವಾಗಿ ಅನುಸರಿಸುವವನು (3)
15) ಜೇಷ್ಠ ಶುದ್ಧ ಈ ದಿನದಂದು ಶಾಸ್ತ್ರ ಗ್ರಂಥಗಳನ್ನು ಪೂಜಿಸುವರು (3)

ರಚನೆ : **ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ**

**ಎಡದಿಂದ ಬಲಕ್ಕೆ**
1) 6 ಪದ್ಮ ಸರೋವರಗಳಲ್ಲಿರುವ ದೇವಿಯರಲ್ಲಿ ಒಬ್ಬರು (4)
2) ಸಪ್ತ ತತ್ವಗಳಲ್ಲಿ ಒಂದಾದ ಇದು ಪುಣ್ಯ,ಪಾಪ ರೂಪವಾದ ಕರ್ಮವು ಜೀವದೊಳಕ್ಕೆ ಹರಿಯುವುದು (3)
4) ಜ್ಞಾನದ ಅಭಾವ ಅಥವಾ ಮಿಥ್ಯಾ ಜ್ಞಾನ ತಿರುಗಿದೆ (3)
6) 6 ವಿಧವಾದ ಬಾಹ್ಯತಪಸ್ಸುಗಳಲ್ಲಿ ಒಂದಾದ ಇದು ಉಪವಾಸವೆಂಬ ತಪ (4)
8) ಚತುರ್ದಶ ಪೂರ್ವಗಳಲ್ಲಿ ಪಾರಂಗತನಾದವನು (4)
10) ಕವಿ ಜನ್ನನು ಜೀವದಯಾಷ್ಟಮಿ ವ್ರತದ ಕಥೆಯನ್ನು ಕೇಳಿದ ನಂತರ ಈ ಚರಿತೆಯನ್ನು ಬರೆದನು (4)
12) ಜೀವಿಯ ಜೀವಿತವ್ಯದ ಲಕ್ಷಣದ 10 ವಿಧಗಳು (4)
16) ಮಾಡುವ ಕ್ರಿಯೆಗಳಲ್ಲಿ ಯತ್ನ ಪೂರ್ವಕವಾಗಿ ಪ್ರಾಣಿಗಳಿಗೆ ಹಿಂಸೆಯಾಗದಂತೆ ನಡೆದುಕೊಳ್ಳುವುದು (3)
17) ವರ್ತಮಾನ ಕಾಲದ 14 ಮನುಗಳಲ್ಲಿ 8ನೇಯ ಮನು (4)
18) ಶುಭ ಮತ್ತು ಅಶುಭ ಕರ್ಮಗಳಿಗೆ ಆಶ್ರಯವಾಗಿರುವುದು ಅಥವಾ ಭರತ ಮತ್ತು ಐರಾವತ ಕ್ಷೇತ್ರದಲ್ಲಿನ ಆರ್ಯಖಂಡ




**ಜಿನ ಪದಬಂಧ–05ರ ಉತ್ತರಗಳು**

**ಮೇಲಿನಿಂದ ಕೆಳಕ್ಕೆ** : 1) ಅಂತರಾಯ 3) ದರ್ಶನ 4) ನರಕ 6) ಭೋಗೋಪಭೋಗ 8) ಲಲಿತಾಂಗ 9) ಕಲ್ಪವೃಕ್ಷ 11) ಲಕ್ಷ್ಮೀಮತಿ 13) ಭವಾವಳಿ 16) ನವಧಾ 17) ಸುನಂದ 18) ಕರ್ಮ 19) ಕ್ಷಮಾ 20) ಗಂಗ

**ಎಡದಿಂದ ಬಲಕ್ಕೆ** : 1) ಅಂಕ 2) ಸುದರ್ಶನ 5) ರಾತ್ರಿ ಭೋಜನ 7) ಕಮಲ 9) ಕಷಾಯ 10) ಪದ್ಮಾವತಿ 12) ವೃಷಭ 14) ಮನೋಯೋಗ 15) ಕೇವಲಜ್ಞಾನ 17) ಸುರುಳಿ 18) ಕ್ಷಣಿಕ 20) ಗಂಧಾ 21) ದಶಧರ್ಮ 22) ಮಾನತುಂಗ

# ಚಂದ್ರಗಿರಿಯ ಕಲಾನಿಧಿ : ಚಾವುಂಡರಾಯ ಬಸದಿ

ಕರ್ನಾಟಕದ ಜೈನ ಕಾಶಿ ಎಂದೆನಿಸಿರುವ ಶ್ರವಣಬೆಳಗೊಳವು ಶಾಸನಗಳಲ್ಲಿ 'ಧವಲ ಸರೋವರ" ಎಂದು ಕರೆಯಲ್ಪಟ್ಟಿದ್ದು, ಸ್ವಚ್ಛ ಶುದ್ಧ ಮನಸ್ಸಿನ ಯೋಗಿ ಪುರುಷರಿಗೆ, ಆತ್ಮಕಲ್ಯಾಣದ ಹಾದಿ ಹಿಡಿದು ಬರುವ ಭವ್ಯಜೀವಿಗಳಿಗೆ, ಕಲ್ಮಶಗಳನ್ನು ಕನಸಿನಲ್ಲಿಯೂ ಸ್ಮರಿಸಲಾರದ ಮನಸ್ಸುಗಳಿಗೆ ಪವಿತ್ರಭೂಮಿ ಎನಿಸಿದೆ,

ಶ್ರವಣಬೆಳಗೊಳದಲ್ಲಿ ಎಲ್ಲರ ಕಣ್ಮನ ಸೆಳೆಯುವ ಏಕ ಶಿಲಾಸ್ಥರ ಬೆಟ್ಟಗಳಾದ ಚಂದ್ರಗಿರಿ ಮತ್ತು ವಿಂಧ್ಯಗಿರಿಗಳು ಪಾವನತೆಯ ಪರಮೋಚ್ಚ ಗಿರಿಗಳೆನಿಸಿವೆ. ಗೊಮ್ಮಟನ ತ್ಯಾಗ, ಅಹಿಂಸೆ, ಮೈತ್ರಿಭಾವಗಳನ್ನು ಸಾರುತ್ತಿರುವ ವಿಂಧ್ಯಗಿರಿ ಒಂದೆಡೆ ಇದ್ದರೆ, ಸಮಾಧಿ ಮರಣದ ಮಹಾನವಮಿಯ ದಿಬ್ಬ ಎಂದೆನಿಸಿರುವ ಚಂದ್ರಗಿರಿ ಮತ್ತೊಂದೆಡೆ ಕಂಗೊಳಿಸುತ್ತಿದೆ. ಪ್ರವಾಸಿಗರು, ಜೈನ ಶ್ರದ್ಧಾಳುಗಳು, ಯೋಗಿ ಪುರುಷರು ಹಾಗೂ ಇತಿಹಾಸ ಸಂಶೋಧನಾ ಆಸಕ್ತರನ್ನು ತನ್ನಡೆಗೆ ಸೆಳೆದುಕೊಳ್ಳುವ ಪಾವನ ಭೂಮಿಯಾಗಿದೆ.

ಚಂದ್ರಗಿರಿಯು ಶ್ರವಣಬೆಳಗೊಳದ ಪ್ರಾಚೀನತೆಯನ್ನು ಮೂರು ಸಾವಿರ ವರ್ಷಕ್ಕೂ ಹಿಂದಕ್ಕೆ ತೆಗೆದುಕೊಂಡು ಹೋಗುವ ಐತಿಹಾಸಿಕ ದಾಖಲೆಗಳ ಸಂಗ್ರಹ ರಾಶಿಯನ್ನು ಹೊತ್ತು ನಿಂತಿದೆ.

ಚಂದ್ರಗಿರಿಯಲ್ಲಿ ಒಟ್ಟು ಹದಿನಾಲ್ಕು ಬಸದಿಗಳಿದ್ದು, ಅವುಗಳಲ್ಲಿ ಗಂಗ ಮಂತ್ರಿ ಚಾವುಂಡರಾಯ ನಿರ್ಮಿಸಿದನೆಂದು ಹೇಳಲಾಗುವ ಚಾಮುಂಡರಾಯ ಬಸದಿಯು ಜೈನ ಆದರ್ಶ ಸ್ಮಾರಕಗಳಲ್ಲಿ ಒಂದೆನಿಸಿದೆ. ಚಾಮುಂಡರಾಯ ಬಸದಿಯು ಚಂದ್ರಗಿರಿಯ ಬೆಟ್ಟದ ಮೇಲಿನ ಅತ್ಯುತ್ತಮ ವಾಸ್ತು ಶೈಲಿ ಮತ್ತು ವಿಸ್ತಾರತೆ ಹಾಗೂ ಬಸದಿಯ ಶಿಲ್ಪ ಸೌಂದರ್ಯಕ್ಕೆ ಬೆರಗಾಗಿ ಪುರಾತತ್ವ ಸಂಶೋಧಕರು ಈ ಬಸದಿಯನ್ನು 'ಬಸದಿಗಳ ರಾಜ' ಎಂದು ಉಲ್ಲೇಖಿಸಿದ್ದಾರೆ. ಚಾವುಂಡರಾಯ ಬಸದಿಯನ್ನು ಕ್ರಿ.ಶ.982ರಲ್ಲಿ ಗಂಗರ ನಾಲ್ಕನೇ ರಾಚಮಲ್ಲನ ಕಾಲದಲ್ಲಿ ನಿರ್ಮಿಸಿರಬಹುದೆಂದು ಬಸದಿಯ ವಾಸ್ತುಶಿಲ್ಪಶೈಲಿಯನ್ನು ಗಮನಿಸಿ ಸಂಶೋಧಕರು ಉಲ್ಲೇಖಿಸಿದ್ದಾರೆ. ಅದಕ್ಕೆ ಪೂರಕವೆಂಬಂತೆ ಬಸದಿಯ ಮುಖ್ಯ ಬಾಗಿಲಿನ ಹೊರ ಬದಿಯ ಗೋಡೆಯ ಸಮೀಪದ ಅಧಿಷ್ಠಾನ ಪಟ್ಟಿಗೆ ಮೇಲಿರುವ 12ನೇ ಶತಮಾನದ ಶಾಸನವು "ಶ್ರೀ ಚಾಮುಂಡರಾಯ ಮಾಡಿಸಿದಂ" ಎಂದು ದಾಖಲಿಸಿರುವುದರಿಂದ ಈ ಬಸದಿಯ ನಿರ್ಮಾತೃ ಚಾಮುಂಡರಾಯನೇ ಎಂಬುದು ಖಚಿತವಾಗುತ್ತದೆ ಎಂದು ಸಂಶೋಧಕರಾದ ಆರ್.ನರಸಿಂಹಚಾರ್‌ರವರು ಬೆಟ್ಟದ ಮೇಲಿರುವ 152/122ನೇ ಸಂಖ್ಯೆಯ ಶಾಸನದ ಆಧಾರದಲ್ಲಿ ಉಲ್ಲೇಖಿಸಿದ್ದಾರೆ.

ಈ ಬಸದಿಯು ಏಕರೂಪರಚನೆಯಾಗಿದ್ದು ಗರ್ಭಗೃಹ, ಗೋಪುರ, ಸುಖನಾಸಿ, ನವರಂಗ, ಮುಖಮಂಟಪಗಳನ್ನು ಹೊಂದಿದ್ದು, ಕಠಿಣವಾದ ಗ್ರಾನೈಟ್ ಶಿಲೆಗಳಿಂದ ನಿರ್ಮಿಸಲಾಗಿದೆ. ಈ ಬಸದಿಯು ಜೈನರ 22ನೇ ತೀರ್ಥಂಕರರಾದ ನೇಮಿನಾಥರಿಗೆ ಸಮರ್ಪಿತವಾಗಿದೆ. ಸುಖನಾಸಿಯಲ್ಲಿ ನೇಮಿನಾಥರ ಯಕ್ಷ ಸರ್ವಾಹ್ಣ ಹಾಗೂ ಯಕ್ಷಿ ಕೂಷ್ಮಾಂಡಿನಿದೇವಿಯ ಮನೋಜ್ಞ ಶಿಲ್ಪಗಳನ್ನು ಕಾಣಬಹುದಾಗಿದೆ. ಬಸದಿಯ ಹೊರಭಾಗದಲ್ಲಿ ಚೂಪಾದ ಬಾಗಿದ ಗುಹೆಗಳ ಅಡಿಯಲ್ಲಿ ಹಂಸಗಳ ಸಾಲುಗಳನ್ನು ಕಾಣಬಹುದು. ಕಮಾನುಗಳನ್ನೊಳಗೊಂಡ ಸಣ್ಣ ಸಣ್ಣ ಮಂಟಪಗಳ ಸಾಲಿನಲ್ಲಿ ತೀರ್ಥಂಕರರ, ದೇವಾನುದೇವತೆಗಳ, ಆದರ್ಶ ಪುರುಷ ಮತ್ತು ಸ್ತ್ರೀಯರ ಶಿಲ್ಪಾಕೃತಿಗಳ ಸಾಲು, ಕಲಾತ್ಮಕತೆಯನ್ನೇ ಹೊತ್ತು ನಿಂತಿರುವ, ಧ್ಯಾನ ಮಗ್ನತೆಯ ಭಾವವನ್ನು ಹೊಂದಿರುವ ಸುಂದರ ಕಲಾಕೃತಿಗಳು ಎಂತಹವರನ್ನು ಮೂಕವಿಸ್ಮಿತಗೊಳಿಸುತ್ತವೆ.

ಚಾಮುಂಡರಾಯ ಬಸದಿಯನ್ನು ಕ್ರಿ.ಶ. 982ರಲ್ಲಿ ನಿರ್ಮಿಸಿರಬಹುದಾದರೂ ಗರ್ಭಗೃಹದಲ್ಲಿನ ನೇಮಿನಾಥರ ವಿಗ್ರಹದ ಪೀಠದಲ್ಲಿನ ಕ್ರಿ.ಶ.1138ರ ಶಾಸನವು ಹೊಯ್ಸಳರ ಗಂಗರಾಜನ ಮಗ ಏಚಿರಾಜನು ಜಿನದೇವಾಲಯದ ತ್ರೈಲೋಕ್ಯರಂಜನವನ್ನು ನಿರ್ಮಿಸಲು ಕಾರಣನೆಂದು ತಿಳಿಸುತ್ತದೆ. ಆದ್ದರಿಂದ ಈ ಜಿನಾಲಯವನ್ನು "ಬೊಪ್ಪ ಜಿನಾಲಯ" ಎಂದು ಕರೆಯಲಾಗುತ್ತದೆ. ಆದ್ದರಿಂದ ನೇಮಿನಾಥರ ವಿಗ್ರಹವು ಈ ಬಸದಿಗೆ ಸೇರಿರುವ ಮೂಲವಿಗ್ರಹವಲ್ಲ ಅಥವಾ ಪೀಠವು ಈ ಬಸದಿಗೆ ಸೇರಿದ್ದಲ್ಲ. ಯಾವುದೋ ಕಾಲಾವಧಿಯಲ್ಲಿ ಏಚಿರಾಜನು ಸ್ಥಾಪಿಸಿದ ಜಿನಾಲಯದಿಂದ ತಂದಿರಿಸಿರಬೇಕು. ಏಕೆಂದರೆ ಚಾಮುಂಡರಾಯ ಬಸದಿಯು ಹಲವು ಬಾರಿ ಆಯಾಯ ರಾಜವಂಶಗಳ ಕಾಲದಲ್ಲಿ ಜೀರ್ಣೋದ್ಧಾರ ಕಂಡಿರುವುದು ಬಸದಿಯಲ್ಲಿನ ಕೆಲವು ವಾಸ್ತುಶಿಲ್ಪಗಳ ವಿನ್ಯಾಸದಿಂದ ಕಂಡು ಬರುತ್ತದೆ. ಹಾಗೆಯೇ 12 ನೇ ಶತಮಾನದಲ್ಲಿ ಸಂಪೂರ್ಣ ಜೀರ್ಣೋದ್ಧಾರವನ್ನು ಗಂಗ ರಾಜನ ಮಗ ಏಚನು ಮಾಡಿರಬಹುದೆಂದು ಇತಿಹಾಸ ತಜ್ಞರು ತಿಳಿಯಪಡಿಸುತ್ತಾರೆ.

ಚಾಮುಂಡರಾಯ ಬಸದಿಯ ಮೇಲಂತಸ್ತಿನಲ್ಲಿ ಮತ್ತೊಂದು ಜಿನಾಲಯವನ್ನು ಸ್ಥಾಪಿಸಿದ್ದು, ಇದನ್ನು ಚಾಮುಂಡರಾಯನ ಮಗ ಜಿನ್ನಣ್ಣದೇವ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಈ ಬಸದಿಯ ಗರ್ಭಗೃಹದಲ್ಲಿ ಜೈನರ 23ನೇ ತೀರ್ಥಂಕರರಾದ ಭಗವಾನ್ ಪಾರ್ಶ್ವನಾಥರನ್ನು ಸ್ಥಾಪಿಸಿದ್ದು, ಇಲ್ಲಿರುವ ಶಾಸನವು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಇದರ ನಿರ್ಮಾಣ ಕಾಲ ಕ್ರಿ.ಶ.995 ಆಗಿರಬಹುದೆಂದು ಹೇಳಲಾಗುತ್ತದೆ. ಚಾಮುಂಡರಾಯ ಬಸದಿಯ ಮುಖಮಂಟಪವು ಮುಂದೆ ಹೊಯ್ಸಳರ ಕಾಲದಲ್ಲಿ ಸೇರ್ಪಡೆಯಾಗಿದೆ ಎಂಬುದನ್ನು ಇತಿಹಾಸಕಾರರು ಉಲ್ಲೇಖಿಸುತ್ತಾರೆ.

ಚಾಮುಂಡರಾಯ ಬಸದಿಯು ಎರಡು ಅಂತಸ್ತಿನ ಜಿನಾಲಯವಾಗಿದ್ದು, ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದೆ. ಪಾಶ್ಚಾತ್ಯ ಗಂಗ ಶೈಲಿ ಹಾಗೂ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಿಂದ ಪ್ರಭಾವಿತವಾಗಿರಬಹುದೆಂದು ಸಂಶೋಧಕರು ಉಲ್ಲೇಖಿಸುತ್ತಾರೆ.

ಅತ್ಯುತ್ಯಮ ಕಲಾಶೈಲಿಯನ್ನೊಂದಿರುವ ಚಾಮುಂಡರಾಯ ಬಸದಿಯು, ಗಂಗರ ಕಾಲದ ಆದರ್ಶ ಪುರುಷನ ವ್ಯಕ್ತಿತ್ವದ, ಧಾರ್ಮಿಕತೆಯ, ಧರ್ಮಶ್ರದ್ಧೆಯ ಸಾರ್ಥಕತೆಯನ್ನು ಸಾರುವ ಸಂಕೇತವಾಗಿದೆ. ಆದ್ದರಿಂದಲೇ ಈ ಬಸದಿಯನ್ನು ಆದರ್ಶ ಸ್ಮಾರಕ ಎಂದು ಪುರಾತತ್ವ ತಜ್ಞರು ಕರೆದಿದ್ದಾರೆ. ಇದು ಜೈನ ಮುನಿಗಳಿಗೆ, ಮಾತೆಯರಿಗೆ, ಶ್ರಾವಕರಿಗೆ ಜಿನರ ಆದರ್ಶ ಗುಣಗಳನ್ನು ಮೈದುಂಬಿಗೊಳ್ಳಲು ನೆಮ್ಮದಿಯ ತಾಣವಾಗಿದೆ. ತೀರ್ಥಂಕರರ ಸಮವಸರಣದ ದಿವ್ಯಸಭೆಯನ್ನು ನೆನಪಿಗೆ ತರುವ ಪಾವನ ನೆಲೆಯಾಗಿದೆ. ಕಲಾವೈಶಿಷ್ಟವನ್ನು ಗೌರವಿಸುವ ಕಲಾಪ್ರಿಯರಿಗೆ, ಸಂಶೋಧಕರಿಗೆ ಕಲಾನಿಧಿಯಂತೆ ಬಾಸವಾಗುತ್ತದೆ. ಬಸದಿಯ ಒಳಹೊಕ್ಕ ಕ್ಷಣದಲ್ಲಿ ಭಾವ ಪರವಶರಾಗಿ ಜಿನಧ್ಯಾನದಲ್ಲಿ ತಲ್ಲೀನವಾಗುವಂತೆ ಮಾಡುತ್ತದೆ. ಇಂತಹ ಶ್ರೇಷ್ಠತೆಯನ್ನು ಹೊಂದಿರುವ ಚಾಮುಂಡರಾಯ ಬಸದಿಯ ನಿರ್ಮಾಣವಾಗಿ 1041 ವರ್ಷಗಳು ಉರುಳಿದರೂ ಸಹ ಚಂದ್ರಗಿರಿಯಲ್ಲಿ ವಾಸ್ತುಕಲಾನಿಧಿಯಂತೆ ಕಾಣುತ್ತಾ ಎಲ್ಲರನ್ನೂ ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಚಂದ್ರಗಿರಿಯನ್ನು ನೋಡ ಹೋದವರಿಗೆ ಆತ್ಮಾಭಿರುಚಿಯೊಂದಿಗೆ ಕಲಾಸವಿಯನ್ನು ಉಣಬಡಿಸಿ ಮನದಣಿಯುವಂತೆ ಮಾಡುತ್ತದೆ. ಯಾರೇ ಶ್ರವಣಬೆಳಗೊಳಕ್ಕೆ ಹೋದರೂ, ಒಮ್ಮೆ ಈ ಆದರ್ಶ ಸ್ಮಾರಕವನ್ನು ಕಣ್ಣಾರೆ ಕಂಡು ಕರಮುಗಿದು ಬನ್ನಿ: ಮನದಣಿದು ಬನ್ನಿ.

**ಲೇಖನ : ವೀರೇಂದ್ರ ಬೇಗೂರು, ಶ್ರವಣಬೆಳಗೊಳ**

## ಪ್ರಾಕೃತ ಕಲಿಯಿರಿ

**ವತ್ಥುವಾಚಗ (ವಸ್ತುವಾಚಕ)**

| | | | |
|---|---|---|---|
| ಲಯಾ ➤ | ಲತೆ | ಮಾಲಾ ➤ | ಮಾಲೆ |
| ತರು ➤ | ಗಿಡ | ತಡಾಗ ➤ | ಕೆರೆ |
| ರುಕ್ಖ ➤ | ವೃಕ್ಷ | ಪವಣ ➤ | ಗಾಳಿ |
| ಣಈ ➤ | ನದೀ | ದುದ್ದ ➤ | ಹಾಲು |
| ಗಿರೀ ➤ | ಬೆಟ್ಟ | ಪುತ್ಥಗ ➤ | ಪುಸ್ತಕ |


**ಪಾಣಿವಾಚಗ (ಪ್ರಾಣಿವಾಚಕ)**

| | | | |
|---|---|---|---|
| ಧೇಣೂ ➤ | ಹಸು | ಹಯ ➤ | ಕುದುರೆ |
| ವಾಣರ ➤ | ಮಂಗ | ಕುಕ್ಕುರ ➤ | ನಾಯಿ |
| ಸಿಂಘ ➤ | ಸಿಂಹ | ಸುಅ ➤ | ಗಿಳಿ |
| ಗಯ ➤ | ಆನೆ | ಹಂಸಪಕ್ಖಿ ➤ | ಹಂಸಪಕ್ಷಿ |
| ರಾಸಹ ➤ | ಕತ್ತೆ | ಮಊರ ➤ | ನವಿಲು |
| ಮಹಿಸೀ ➤ | ಎಮ್ಮೆ | ಕಾಅ/ಕಾಗ ➤ | ಕಾಗೆ |

**ಥಲವಾಚಗ (ಸ್ಥಳವಾಚಕ)**

| | | | |
|---|---|---|---|
| ಣಯರ ➤ | ನಗರ | ಲೋಯ ➤ | ಲೋಕ |
| ಗಾಮ ➤ | ಗ್ರಾಮ | ಕೂಅ ➤ | ಬಾವಿ |
| ಸಾಲಾ ➤ | ಶಾಲೆ | ಕಮಲವಣ ➤ | ಕಮಲವನ |
| ವಿಜ್ಜಾಲಯ ➤ | ವಿದ್ಯಾಲಯ | ಉಜ್ಜಾಣ ➤ | ಉದ್ಯಾನ |
| ಘರ/ಗಿಹ ➤ | ಮನೆ | ಖೆತ್ತ ➤ | ಕ್ಷೇತ್ರ/ಗದ್ದೆ |
| ದೇವಾಲಯ ➤ | ದೇವಾಲಯ | ಉವವಣ ➤ | ಉಪವನ |
| ಮಂದಿರ ➤ | ಮಂದಿರ | | |

## ಭಾವಪೂರ್ಣ ಶ್ರದ್ಧಾಂಜಲಿ



ಜನನ 01–04–1939 ಜಿನೈಕ್ಯ 22–11–2023

**ಶ್ರೀ ಎನ್.ಪಿ. ನಾಗಕುಮಾರ್**
ಕರಡಿ ವಂಶಸ್ಥರು, ಶ್ರವಣಬೆಳಗೊಳ

ದಿನಾಂಕ : 22–11–2023ರಂದು ಜಿನೈಕ್ಯರಾದ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ

* ದು:ಖತಪ್ತರು *
ಪತ್ನಿ : ಶ್ರೀಮತಿ ಪ್ರೇಮ
ಹಿರಿಯ ಮಗ : ಎನ್.ಎನ್. ಪಾರ್ಶ್ವನಾಥ
ಕಿರಿಯ ಮಗ : ಎನ್.ಎನ್. ಪದ್ಮೇಶ
ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಬಂಧು ಮಿತ್ರರು

## ಭಾವಪೂರ್ಣ ಶ್ರದ್ಧಾಂಜಲಿ



ಜನನ 24–06–1959 ಮರಣ 17–11–2023

**ಶ್ರೀಮತಿ ಎನ್.ಎಂ. ಸುಜಾತ**
ಸಿದ್ಧಗಂಗಾ ಬಡಾವಣೆ, ತುಮಕೂರು

ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ
ದು:ಖಭಾಗಿಗಳು
**ಪತಿ : ಎನ್.ಎಂ. ಪ್ರಸನ್ನಕುಮಾರ್, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ನೆಟ್‌ಕುಂಟೆ ಕುಟುಂಬವರ್ಗ**

## 3ನೇ ವರ್ಷದ ಪುಣ್ಯಸ್ಮರಣೆ




ಮರಣ : 28–11–2020

**ಶ್ರೀಮತಿ ವಸುಂಧರಮ್ಮ**
ದಿ. ಶ್ರೀ ಹೆಚ್.ಕೆ. ನಾಗಕುಮಾರ್, ಸಬ್‌ರಿಜಿಸ್ಟ್ರಾರ್, ಹೊಸದುರ್ಗ ಅವರ ಧರ್ಮಪತ್ನಿ

ನಿಮ್ಮ ನೆನಪು, ಆದರ್ಶ ಜೀವನ ಹಚ್ಚ ಹಸಿರಾಗಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.
**ಮಕ್ಕಳು ಹಾಗೂ ಮೊಮ್ಮಕ್ಕಳು**

## ಮುನಿಶ್ರೀ ಆದಿಸಾಗರ ಮಹಾರಾಜರ ಸಂಘದ ವಿಹಾರ



**ಶ್ರವಣಬೆಳಗೊಳ, ನ.21 :** ಶ್ರೀಕ್ಷೇತ್ರದಲ್ಲಿ ಚಾತುರ್ಮಾಸ ಆಚರಿಸಿದ ಪ.ಪೂ. ಮುನಿಶ್ರೀ 108 ಆದಿಸಾಗರ ಮಹಾರಾಜರು ಮತ್ತು ಪ.ಪೂ. ಮುನಿಶ್ರೀ 108 ನಿರ್ದೋಷ ಸಾಗರ ಮಹಾರಾಜರು ವಿಹಾರ ಕೈಗೊಂಡರು. ಮುನಿಗಳಿಗೆ ಪೂ. ಚಾರುಕೀರ್ತಿ ಶ್ರೀಗಳವರು ಪಾದಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಪ.ಪೂ. ಮುನಿಶ್ರೀಗಳವರು ಅಭಿನವ ಚಾರುಕೀರ್ತಿ ಶ್ರೀಗಳವರ ನೇತೃತ್ವದಲ್ಲಿ ವರ್ಷಾಯೋಗ ಚಾತುರ್ಮಾಸ್ಯವು ವೈಭವ ಧರ್ಮ ಪ್ರಭಾವನೆಯೊಂದಿಗೆ ನಡೆದಿರುವುದು ಸಂತಸ ತಂದಿದೆ. ಮಂಗಳ ವಾದ್ಯಗಳು ಹಾಗೂ ನೂರಾರು ಶ್ರಾವಕ–ಶ್ರಾವಕಿಯರ ಜಯಕಾರದೊಂದಿಗೆ ಮುನಿದ್ವಯರ ವಿಹಾರವು ಬೆಳ್ಳೂರಿನತ್ತ ಸಾಗಿತು.

# ನಲ್ಲೂರಿಗೆ ಅಭಿನವ ಶ್ರೀಗಳವರ ಪ್ರಥಮ ಪುರ ಪ್ರವೇಶ







ಶುಭಚಂದ್ರ ಸಿದ್ಧಾಂತ ದೇವರ ಸಮಾಧಿ



ಕೂರ್ಮಪೀಠ ವೀಕ್ಷಿಸುತ್ತಿರುವ ಪೂಜ್ಯ ಶ್ರೀಗಳವರು

**ಕಾರ್ಕಳ, ನ. 28 :** 'ಶ್ರವಣಬೆಳಗೊಳದ ಕೂಷ್ಮಾಂಡಿನಿ ಅಮ್ಮನವರು ನೆಲೆನಿಂತ ಕ್ಷೇತ್ರ, ಶ್ರವಣಬೆಳಗೊಳ ಗುರುಪೀಠಕ್ಕೆ ಚಾರುಕೀರ್ತಿ ಉಪಾದಿ ತಂದುಕೊಟ್ಟ, ಶುಭಚಂದ್ರ ಸಿದ್ಧಾಂತ ದೇವರು (ಸುಮಾರು 900 ವರ್ಷಗಳ ಹಿಂದಿನ ಭಟ್ಟಾರಕರು) ಸಮಾಧಿ ಹೊಂದಿದ ಕ್ಷೇತ್ರ, ಶ್ರವಣಬೆಳಗೊಳದಿಂದ ನಲ್ಲೂರಿನವರೆಗೆ ಕೂಷ್ಮಾಂಡಿನಿ ಅಮ್ಮನವರ ಮೂರ್ತಿಯ ಸಹಿತ ಭಟ್ಟಾರಕರನ್ನು ಹಾಗೂ ಸಿದ್ಧಾಂತ ಗ್ರಂಥಗಳನ್ನು ಹೊತ್ತು ತಂದ ಆನೆಯ ಸಮಾಧಿ ಇರುವ ಕ್ಷೇತ್ರ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ದೀಕ್ಷಾ ಗುರುಗಳಾದ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರಿಗೆ ಅತಿ ಪ್ರಿಯವಾದ ಕ್ಷೇತ್ರ ನಲ್ಲೂರು. ಅವರು 1998ರಲ್ಲಿ ಚಾತುರ್ಮಾಸ ಕೈಗೊಂಡ ಕ್ಷೇತ್ರ. ಈ ಎಲ್ಲಾ ಕಾರಣಗಳಿಂದ ಮೊದಲಿಗೆ ನಲ್ಲೂರಿನ ಕೂಷ್ಮಾಂಡಿನಿ ಅಮ್ಮನವರ ದರ್ಶನ ಮಾಡಬೇಕೆಂದು ನಲ್ಲೂರಿಗೆ ಪ್ರಥಮ ಪುರಪ್ರವೇಶ ಮಾಡಲಾಯಿತು' ಎಂದು ಶ್ರೀಕ್ಷೇತ್ರ ಶ್ರವಣಬೆಳಗೊಳದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಅತಿಶಯ ಕೇತ್ರ ನಲ್ಲೂರು ಬಸದಿಗೆ ಪುರಪ್ರವೇಶ ಮಾಡಿ, ಶ್ರೀ ಕೂಷ್ಮಾಂಡಿನಿ ಸಭಾಭವನದಲ್ಲಿ ನಡೆದ ಗುರುವಂದನೆ ಮತ್ತು ಭಕ್ತಿ ಗೌರವ ಸಮರ್ಪಣಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಕಾರ್ತಿಕ ದೀಪೋತ್ಸವದ ಪ್ರಯುಕ್ತ ಕ್ಷೇತ್ರದಲ್ಲಿ ದೀಪಗಳನ್ನು ಬೆಳಗಿಸಲಾಗುತ್ತದೆ. ದೀಪದಿಂದ ಹೊರಹೊಮ್ಮಿದ ಜ್ಞಾನ ದೀಪ ಆತ್ಮನ ಜೊತೆ ಶಾಶ್ವತವಾಗಿರುವುದು. ಅಂತಹ ಜ್ಞಾನ ದೀಪದ ಆರಾಧನೆಯಾಗಬೇಕೆಂದರು.

ಮೂಡುಬಿದಿರೆಯ ಪ.ಪೂ. ಭಾರತಭೂಷಣ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಆಶೀರ್ವಚನ ನೀಡುತ್ತಾ, ಭಕ್ತಿಗೆ ಒಲಿದು ಶ್ರೀ ಕೂಷ್ಮಾಂಡಿನಿ ದೇವಿ ನೆಲೆ ನಿಂತ ಪಾವನ ಕ್ಷೇತ್ರವೇ ನಲ್ಲೂರು. ಶ್ರವಣಬೆಳಗೊಳದ ಅಭಿನವ ಶ್ರೀಗಳವರು ನಲ್ಲೂರು ಕ್ಷೇತ್ರಕ್ಕೆ ಪುರಪ್ರವೇಶ ಮಾಡಿರುವುದು ಸಂತಸದಾಯಕವಾಗಿದೆ. ಶ್ರವಣಬೆಳಗೊಳದಲ್ಲಿ ಎರಡು ಬಾರಿ ಕನ್ನಡ ಸಾಹಿತ್ಯ ಕಾರ್ಯಕ್ರಮ ನಡೆದಿದೆ. ಮುಂದೆಯೂ ಸಾಹಿತ್ಯ, ಧರ್ಮ, ಸಂಸ್ಕೃತಿಯಾಧಾರಿತ ಕಾರ್ಯಕ್ರಮ ನಿರಂತರವಾಗಿ ನಡೆಯಲಿ ಎಂದು ಆಶಿಸಿದರು. ಮಾಜಿ ಸಚಿವ ಅಭಯ್ ಕುಮಾರ್ ಜೈನ್‌ರವರು ಮಾತನಾಡಿ ಶ್ರೀಕ್ಷೇತ್ರ ಶ್ರವಣಬೆಳಗೊಳವು ಕೇವಲ ಜೈನ ಸಮುದಾಯಕ್ಕೆ ಸೀಮಿತವಾಗದೇ ಸಮಸ್ತ ಸಮಾಜದ ಪುಣ್ಯ ಕ್ಷೇತ್ರವಾಗಿದೆ. ಈ ಕ್ಷೇತ್ರವು ಶೈಕ್ಷಣಿಕ, ಸಾಮಾಜಿಕ, ವೈದ್ಯಕೀಯ ರಂಗಕ್ಕೆ ನೀಡಿದ ಸೇವೆ ಅನನ್ಯ. ಮುಂದಿನ ದಿನಗಳಲ್ಲಿ ಶ್ರವಣಬೆಳಗೊಳದ ಆವಶ್ಯಕತೆಗಳ ಕುರಿತು ಸರಕಾರದ ಗಮನ ಸೆಳೆಯುವಲ್ಲಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಹಿರಿಯ ನ್ಯಾಯವಾದಿ ಎಂ.ಕೆ. ವಿಜಯ ಕುಮಾರ್‌ರವರು ಮಾತನಾಡುತ್ತಾ ನಮ್ಮ ಸಮಾಜದ ಸಂಸ್ಕಾರ, ಸಂಸ್ಕೃತಿಯನ್ನು ಇಂದಿನ ಪೀಳಿಗೆಗೆ ಪಸರಿಸಿದ ಕೀರ್ತಿ ನಮ್ಮ ಹಿಂದಿನ ಕರ್ಮಯೋಗಿ ಶ್ರೀಗಳವರಿಗೆ ಸಲ್ಲುತ್ತದೆ. ಜೈನ ಸಮುದಾಯದ ಸರ್ವತೋಮುಖ ಏಳಿಗೆಯಲ್ಲಿ ಸ್ವಾಮಿಗಳವರ ಪಾತ್ರ ಮಹತ್ತರವಾದುದು ಎಂದರು.

ನಲ್ಲೂರಿಗೆ ಆಗಮಿಸಿದ ಅಭಿನವ ಶ್ರೀಗಳವರನ್ನು ನಲ್ಲೂರು ಹಾಗೂ ಸುತ್ತಮುತ್ತಲಿನ ಸಮಾಜ ಬಾಂಧವರು ಪೂರ್ಣಕುಂಭದೊಂದಿಗೆ ಸ್ವಾಗತಿಸಿ, ಅಡ್ಡಪಲ್ಲಕ್ಕಿಯಲ್ಲಿ ಶ್ರೀಗಳವರ ಭವ್ಯ ಮೆರವಣಿಗೆಯು ಪ್ರಮುಖ ರಸ್ತೆಗಳಲ್ಲಿ ಸಾಗಿ ಬಸದಿಗೆ ಆಗಮಿಸಿ, ಶ್ರೀಗಳವರು ಕೂಷ್ಮಾಂಡಿನಿ ದೇವಿಯ ದರ್ಶನ ಪಡೆದರು. ಸಂಜೆ 108ದ್ರವ್ಯಗಳಿಂದ ದೇವಿಗೆ ವಿಶೇಷ ಪೂಜೆ ನೆರವೇರಿಸಿದರು. ಶ್ರೀ ಕೂಷ್ಮಾಂಡಿನಿ ದೇವಿಯ ಆರಾಧನೆ, ಉಯ್ಯಾಲೆ ಸೇವೆ, ಅಷ್ಟಾವಧಾನ ಪೂಜೆ, ಊರಿನ ಪ್ರಮುಖ ರಸ್ತೆಗಳಲ್ಲಿ ಸರ್ವಾಹ್ಣ ಯಕ್ಷನ ಉತ್ಸವ ಮತ್ತು ದೀಪೋತ್ಸವ ಬಹಳ ವಿಜೃಂಭಣೆಯಿಂದ ಜರುಗಿತು.

## ದೀಕ್ಷಾರ್ಥಿಗಳಿಗೆ ಉಡಿ ಸಮರ್ಪಣೆ




**ಶ್ರವಣಬೆಳಗೊಳ, ನ. 29 :** ಗಣಿನೀ ಆರ್ಯಿಕಾ ಶ್ರೀ 105 ವಿಶಾಶ್ರೀ ಮಾತಾಜಿಯವರ ಸಂಘಸ್ಥ ಶಿವಾ ದೀದಿ, ರೋನಕ್ ದೀದಿ, ಶೆಲ್ಲಿ ದೀದಿ, ಸಪ್ನಾ ದೀದಿರವರು ಡಿಸೆಂಬರ್ 16ರಂದು ಕೋಲ್ಕತ್ತಾದಲ್ಲಿ ಶ್ರೀ 105 ವಿಶಾಶ್ರೀ ಮಾತಾಜಿಯವರಿಂದ ದೀಕ್ಷೆಯನ್ನು ತೆಗೆದುಕೊಳ್ಳಲಿದ್ದು, ಅವರು ಭ. ಶ್ರೀ ಬಾಹುಬಲಿ ಸ್ವಾಮಿಯ ದರ್ಶನಕ್ಕಾಗಿ ಶ್ರವಣಬೆಳಗೊಳಕ್ಕೆ ಆಗಮಿಸಿದ್ದರು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ದೀಕ್ಷಾರ್ಥಿಗಳಿಗೆ ಶ್ರೀಮಠದ ಬಸದಿಯಲ್ಲಿ ಉಡಿತುಂಬಿ ವಿನಯ ಸಮರ್ಪಿಸಿದರು.

## ಶ್ರವಣಬೆಳಗೊಳದಲ್ಲಿ ಮೈಸೂರು ವಿಭಾಗ ಮಟ್ಟದ ಜಿನ ಭಜನಾ ಸ್ಪರ್ಧೆ



**ಶ್ರವಣಬೆಳಗೊಳ, ನ. 19 :** ಭಾರತೀಯ ಜೈನ ಮಿಲನ್ : ವಲಯ–8 ಮೈಸೂರು ವಿಭಾಗ, ಶ್ರವಣಬೆಳಗೊಳದ ಕೂಷ್ಮಾಂಡಿನಿ ಜೈನ ಮಹಿಳಾ ಸಮಾಜ ಹಾಗೂ ದಿಗಂಬರ ಜೈನ ಸಮಾಜ ಸಂಯುಕ್ತವಾಗಿ ಚಾವುಂಡರಾಯ ಸಭಾ ಮಂಟಪದಲ್ಲಿ ಏರ್ಪಡಿಸಿದ್ದ ಮೈಸೂರು ವಿಭಾಗ ಮಟ್ಟದ ಜಿನ ಭಜನಾ ಸ್ಪರ್ಧೆಯ 7ನೇ ಆವೃತ್ತಿಯನ್ನು ಯುಗಲ ಮುನಿಗಳಾದ ಪ.ಪೂ. ಮುನಿಶ್ರೀ ಅಮೋಘಕೀರ್ತಿ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ ಅಮರಕೀರ್ತಿ ಮಹಾರಾಜರ ಪಾವನ ಸಾನ್ನಿಧ್ಯದಲ್ಲಿ ಮತ್ತು ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಭಾರತೀಯ ಜೈನ ಮಿಲನ್‌ನ ಕಾರ್ಯಾಧ್ಯಕ್ಷ ಶ್ರೀ ಡಿ. ಸುರೇಂದ್ರ ಕುಮಾರ್ ಹಾಗೂ ಮಿಲನ್‌ನ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀಮತಿ ಡಿ. ಅನಿತಾ ಸುರೇಂದ್ರಕುಮಾರ್‌ರವರು ಉದ್ಘಾಟಿಸಿದರು. ಶ್ರದ್ಧಾ ಅಮಿತ್, ಕೆ. ಯುವರಾಜ ಭಂಡಾರಿ, ನಾ. ಪ್ರಸನ್ನ ಕುಮಾರ್, ಮಹಾಲಕ್ಷ್ಮಿ ಪ್ರಮೋದ್ ಕುಮಾರ್, ಜಿ.ಪಿ.ಪದ್ಮಕುಮಾರ್ ಮತ್ತಿತರರು ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಹಾಸನ ಜಿಲ್ಲೆಯ ಪ್ರತಿನಿಧಿಗಳು ಪಾಲ್ಗೊಂಡಿದ್ದು, ಅದರಲ್ಲಿ 9 ಕಿರಿಯರ ತಂಡ, 17 ಹಿರಿಯರ ತಂಡಗಳು ಭಾಗವಹಿಸಿ ಭಜನೆಗಳನ್ನು ಹಾಡಿದರು. ಕಿರಿಯರ ವಿಭಾಗದಲ್ಲಿ ಪ್ರಥಮ ಸ್ಥಾನ : ಪ್ರಿಯಕಾರಿಣಿ ಜಿನಭಜನಾ ತಂಡ ಮತ್ತು ತ್ರಿಲೋಕ್ ಜೈನ್ ಮಿಲನ್–ಹಾಸನ, ದ್ವಿತೀಯ ಸ್ಥಾನ : ಚಂದನಬಾಲ ಜಿನಭಜನಾ ತಂಡ ಮತ್ತು ಶ್ರೀ ಚಂದ್ರಪ್ರಭಾ ಜೈನ್‌ಮಿಲನ್–ಚಕ್ಕೂರು, ತೃತೀಯ ಸ್ಥಾನ : ಅಂಬಿಕಾ ಜಿನಭಜನಾ ತಂಡ–ಶ್ರವಣಬೆಳಗೊಳ. ಹಿರಿಯರ ವಿಭಾಗದಲ್ಲಿ ಪ್ರಥಮ ಸ್ಥಾನ : ಸಿದ್ಧಾಯಿನಿ ಜಿನಭಜನಾ ತಂಡ ಮತ್ತು ತ್ರಿಲೋಕ್ ಜೈನ್‌ಮಿಲನ್–ಹಾಸನ, ದ್ವಿತೀಯ ಸ್ಥಾನ : ಶ್ರೀ ಮಹಾವೀರ ಜಿನಭಜನಾ ತಂಡ ಮತ್ತು ಶ್ರೀ ಮಹಾವೀರ ಜೈನ್ ಮಿಲನ್–ಕಾಳಿಹುಂಡಿ, ತೃತೀಯ ಸ್ಥಾನ : ಧವಳ ಧ್ವನಿ ಜಿನಭಜನಾ ತಂಡ–ಶ್ರವಣಬೆಳಗೊಳ

## ಬಸದಿಹೊಸಕೋಟೆಯ ಭ. ಬಾಹುಬಲಿ ಸ್ವಾಮಿಗೆ ಚಾರುಶ್ರೀಗಳವರಿಂದ ಮಸ್ತಕಾಭಿಷೇಕ







**ಬಸದಿಹೊಸಕೋಟೆ, ನ. 30 :** ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಬಸದಿಹೊಸಕೋಟೆಯ ಭ. ಬಾಹುಬಲಿ ಸ್ವಾಮಿಯ ದರ್ಶನ ಹಾಗೂ ಪಂಚಾಮೃತ ಅಭಿಷೇಕ ಮಾಡಿ ಭಕ್ತಿ ಸಮರ್ಪಿಸಿದರು. ನಂತರ ಪ.ಪೂ. ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹಾಗೂ ಪ.ಪೂ. ಮುನಿಶ್ರೀ 108 ಅಮರಕೀರ್ತಿ ಮಹಾರಾಜರಿಗೆ ಪಾದಪೂಜೆ ನೆರವೇರಿಸಿ ರತ್ನತ್ರಯ ಕುಶಲವನ್ನು ವಿಚಾರಿಸಿದರು.

## ಶ್ರೀಗಳವರ ಪ್ರಥಮ ಮಂಗಲ ಬಿಜಯಂಗೈವ ಕಾರ್ಯಕ್ರಮ

(...ಮೊದಲ ಪುಟದಿಂದ) ಮಂಗಲಕಲಶ ಹಿಡಿದ ಮಹಿಳೆಯರು, ಕಾವಿಬಟ್ಟೆ ಧರಿಸಿ ಪಿಂಛಿ ಹಿಡಿದ ಭಟ್ಟಾರಕ ವೇಷಧಾರಿ ಪುಟಾಣಿಗಳ ತಂಡ, ಚಂಡೆ ವಾದ್ಯ, ಮಂಗಳ ವಾದ್ಯ ತಂಡ, ಅಕ್ಷತೆ ಪುಷ್ಪ ಶಾಸ್ತ್ರಗಳನ್ನು ಹಿಡಿದ ಮಹಿಳಾ ತಂಡ, ಪುರೋಹಿತರು–ಶಾಸ್ತ್ರಿಗಳ ತಂಡ, ಧರ್ಮಧ್ವಜಗಳನ್ನು ಹಿಡಿದ ಶಾಲೆ ಮತ್ತು ವಿದ್ಯಾಪೀಠದ ವಿದ್ಯಾರ್ಥಿಗಳು, ಮಹಿಳಾ ತಾಳ ತಂಡ, ಮಹಿಳಾ ಜೈನ ಜನಪದ ತಂಡ, ಭರತನಾಟ್ಯ ಕಲಾ ತಂಡ, ಮಕ್ಕಳ ಜಯಗಂಟೆ ತಂಡಗಳೊಂದಿಗೆ ವಿಹಾರವು ಭಂಡಾರಿ ಬಸದಿ ಶ್ರೀಮಠದ ರಸ್ತೆ ಮೂಲಕ ಶ್ರವಣಬೆಳಗೊಳದ ಪ್ರಮುಖ ರಸ್ತೆಗಳಲ್ಲಿ ಸಾಗಿ ಮಂಗಾಯಿಬಸದಿಯಿಂದ ಪೂಜ್ಯ ಶ್ರೀಗಳವರನ್ನು ಬೀಳ್ಕೊಡಲಾಯಿತು. ಅಲ್ಲಿಂದ ಪೂಜ್ಯ ಶ್ರೀಗಳವರು ಶ್ರೀ ಕೂಷ್ಮಾಂಡಿನಿ ದೇವಿಯ ಮೂಲ ಸ್ಥಳ ಜಕ್ಕಳಮ್ಮ ಬಸದಿಗೆ ಬಿಜಯಂಗೈದರು. ಶ್ರೀ ಜಕ್ಕಳಮ್ಮ–ಕೂಷ್ಮಾಂಡಿನಿ ದೇವಿ ಮತ್ತು ಸಪ್ತ ಕನ್ನಿಕೆಯರಿಗೆ ವಿಶೇಷ ಪೂಜೆ, ಮಹಾಮಂಗಳಾರತಿ ನೆರವೇರಿಸಿದ ನಂತರ ಶ್ರೀಗಳು ಶ್ರೀಮಠಕ್ಕೆ ಹಿಂತಿರುಗುತ್ತಿದ್ದಂತೆ ಪುಷ್ಪವೃಷ್ಟಿಯೊಂದಿಗೆ ಬರಮಾಡಿ–ಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಕೂಷ್ಮಾಂಡಿನಿ ಜೈನ ಮಹಿಳಾ ಸಮಾಜ ಮತ್ತು ದಿಗಂಬರ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮೈಸೂರು, ಮಂಡ್ಯ, ಬೆಂಗಳೂರು, ಹಾಸನ ಮತ್ತು ಇತರೆ ಜಿಲ್ಲೆಗಳಿಂದ ಆಗಮಿಸಿದ ಶ್ರಾವಕ ಧರ್ಮಬಂಧುಗಳು ಹಾಗೂ ಗ್ರಾಮಪಂಚಾಯಿತಿಯ ಅಧ್ಯಕ್ಷರು, ಸದಸ್ಯರುಗಳು ಪಾಲ್ಗೊಂಡಿದ್ದರು.









Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443